ಕುರಿತು ಸಂಶೋಧನೆ ನಡೆಸಲಾಗುವುದು' ಎಂದಿದ್ದರು. ಒಟ್ಟಿನಲ್ಲಿ ಚಂದ್ರನ ಅಂಗಳವನ್ನು ಬಗೆದು ಅಲ್ಲಿ ಇರಬಹುದಾದ ಖನಿಜಗಳನ್ನು ಹೊತ್ತು ತರುವ ಪೈಪೋಟಿಯಲ್ಲಿ ಮುಂಚೂಣಿಯ ರಾಷ್ಟ್ರಗಳು ನಾಮುಂದು, ತಾಮುಂದು ಎಂದು ಮುನ್ನುಗ್ಗುತ್ತಿವೆ.

60ರ ದಶಕದಲ್ಲಿ ಬಾಹ್ಯಾಕಾಶದ ಯಾವುದೇ ಚಟುವಟಿಕೆ ಯಾವುದೇ ರಾಷ್ಟ್ರಕ್ಕೆ ಸೇರಿದ್ದಲ್ಲ ಎಂದು ಹೇಳುತ್ತಿದ್ದವರು ಹಾಗೂ ಆ ಕುರಿತ ಒಪ್ಪಂದಕ್ಕೆ ಸಹಿ ಹಾಕಿದವರು, ಈಗ ಚಂದ್ರನ ಅಂಗಳದಲ್ಲಿ ಎಲ್ಲರಿಗಿಂತಲೂ ಮೊದಲು ಇಳಿದು ಗಣಿಗಾರಿಕೆ ಆರಂಭಿಸುವ ಉಮೇದಿನಲ್ಲಿದ್ದಾರೆ.

## ಗೂಗಲ್ ಮ್ಯಾಪ್‌ಗೆ 'ಬೀಡೂ' ಪರ್ಯಾಯ

ಬಾಹ್ಯಾಕಾಶದಲ್ಲಿ ಮಾತ್ರವಲ್ಲ, ಡಿಜಿಟಲ್ ಜಗತ್ತಿನಲ್ಲೂ ಚೀನಾ ತನ್ನದೇ ಆದ ಅನನ್ಯತೆ ಹೊಂದಲು ಪ್ರಯತ್ನಿಸುತ್ತಿದೆ. ಭಾರತವೂ ಸೇರಿದಂತೆ ವಿಶ್ವವ್ಯಾಪಿಯಾಗಿ ಬಳಕೆಯಾಗುತ್ತಿರುವ 'ಗೂಗಲ್ ಮ್ಯಾಪ್'ಗೆ ಪರ್ಯಾಯವಾಗಿ 'ಬೀಡೂ' ಎಂಬ ನ್ಯಾವಿಗೇಷನ್ ತಂತ್ರಜ್ಞಾನವನ್ನು ಚೀನಾ ರೂಪಿಸಿದೆ. ಈ ತಂತ್ರಜ್ಞಾನದ ಬಳಕೆಗಾಗಿ, 35 ಉಪಗ್ರಹಗಳನ್ನು ಬಾಹ್ಯಾಕಾಶದ ಕಕ್ಷೆಗೆ ಸೇರಿಸಿದೆ. ಗುಪ್ತ ಮಾಹಿತಿ ಸಂಗ್ರಹ, ಶತ್ರು ರಾಷ್ಟ್ರಗಳ ಮೇಲೆ ನಿಗಾ, ಕ್ಷಿಪಣಿ ದಾಳಿ ಮತ್ತು ಸೈಬರ್ ದಾಳಿ ನಡೆಸಲು ಕೈನೆಟಿಕ್ ಹಾಗೂ ನಾನ್ ಕೈನೆಟಿಕ್ ಸಾಮರ್ಥ್ಯದ 250 ಸೇನಾ ಉಪಗ್ರಹಗಳನ್ನು ಉಡ್ಡಾಯಿಸಿದೆ ಎಂದು ವಿದೇಶಿ ಮಾಧ್ಯಮಗಳು ವರದಿ ಮಾಡಿವೆ.

ಧೂಮಕೇತು ಹಾಗೂ ಕ್ಷುದ್ರಗ್ರಹಗಳ ಚಲನವಲನಗಳನ್ನು ಗಮನಿಸುವುದು ಮತ್ತು ಅವುಗಳನ್ನು ಸಿಡಿಸುವ ನಿಟ್ಟಿನಲ್ಲೂ ತನ್ನ ಬಾಹ್ಯಾಕಾಶ ಯೋಜನೆಯನ್ನು ಚೀನಾ ವಿಸ್ತರಿಸಿಕೊಂಡಿದೆ. 2019ರಲ್ಲಿ 'ವಿಎಲ್5' ಎಂಬ ಕ್ಷುದ್ರಗ್ರಹವನ್ನು ಚೀನಾ ಪತ್ತೆ ಮಾಡಿತ್ತು. ಇದು ಸುಮಾರು 108 ಅಡಿ ವ್ಯಾಸವಿತ್ತು. ಈ ಕ್ಷುದ್ರಗ್ರಹ ಸೂರ್ಯನ ಸುತ್ತ ಸುತ್ತಲು 365 ದಿನ ತೆಗೆದುಕೊಳ್ಳುತ್ತಿದೆ. ಇದನ್ನು ಹಂತಹಂತವಾಗಿ ನಾಶಪಡಿಸಲು 'ಪ್ಲಾನೆಟರಿ ಡಿಫೆನ್ಸ್ ಮಿಷನ್' ಯೋಜನೆಯನ್ನು ಚೀನಾ 2025ರಲ್ಲಿ ಕೈಗೊಳ್ಳುವ ಯೋಜನೆ ಹೊಂದಿದೆ. ಇದರಲ್ಲಿ ಒಂದು ನೌಕೆ ಕ್ಷುದ್ರಗ್ರಹದ ಕುರಿತು ಅಧ್ಯಯನ ನಡೆಸಿದರೆ, ಮತ್ತೊಂದು ನೌಕೆ ನಿಗದಿತ ಆಕಾಶಕಾಯವನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡುವಂತೆ ಚೀನಾ ತಂತ್ರಜ್ಞರು ಯೋಜನೆ ರೂಪಿಸಿದ್ದಾರೆ ಎಂದು 2021ರಲ್ಲಿ ಪ್ರಕಟಗೊಂಡ ಲೇಖನದಲ್ಲಿ ಹೇಳಲಾಗಿದೆ.

ಚೀನಾದ ಬಾಹ್ಯಾಕಾಶ ಯೋಜನೆಯ ಮುಖ್ಯ ವಿಜ್ಞಾನಿ ವು ವೀರೆನ್ ಅವರ ಪ್ರಕಾರ, 'ವಿಎಲ್5' ಕ್ಷುದ್ರಗ್ರಹವನ್ನು ಚೀನಾದ ನೌಕೆಯು 1 ಅಥವಾ 2 ಇಂಚುಗಳಷ್ಟು ರಂಧ್ರಕೊರೆಯುವ ಸಾಮರ್ಥ್ಯ ಹೊಂದಿದೆ. ಮೂರು ತಿಂಗಳಲ್ಲಿ 650 ಮೈಲಿಗಳಷ್ಟು ಆಳವಾಗಿ ರಂಧ್ರ ಕೊರೆಯುವ ಸಾಮರ್ಥ್ಯವನ್ನು ಈ ನೌಕೆ ಹೆಚ್ಚಿಸಿಕೊಳ್ಳುವ ಸಾಮರ್ಥ್ಯ ಹೊಂದಲಿದೆ ಎಂದು ವರದಿಯಾಗಿದೆ.

ದೇಶದ ನೈರುತ್ಯ ಭಾಗದಲ್ಲಿ 25 ರ‍್ಯಾಡಾರ್‌ಗಳನ್ನು ಚೀನಾ ಸ್ಥಾಪಿಸಿದೆ. ಈ ಯಾಂತ್ರಿಕ ಕಾವಲುಗಾರರು, ಒಂದು ಕೋಟಿ ಕಿಲೋಮೀಟರ್ ದೂರದವರೆಗೂ ಕ್ಷುದ್ರಗ್ರಹದ ಮಾಹಿತಿ ಕಲೆಹಾಕಲಿವೆ. ಬಾಹ್ಯಾಕಾಶದ ಈ ತಾಂತ್ರಿಕ ಸಾಧನೆಯನ್ನು ಚೀನಾ ತನ್ನ ಸೇನಾ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳುವ ನಿಟ್ಟಿನಲ್ಲೂ ಕಾರ್ಯಸೂಚಿ ಹೊಂದಿದೆ.

## ಕೃತಕ ಬುದ್ಧಿಮತ್ತೆ ಬೆಳವಣಿಗೆಗೆ ಒತ್ತು

2023ರ ಅತಿ ದೊಡ್ಡ ಸಂಚಲನ 'ಚಾಟ್‌ಬಾಟ್'ಗಳಿಗೆ ಸಂಬಂಧಿಸಿದ್ದು. 'ಚಾಟ್‌ಜಿಪಿಟಿ', 'ಗೂಗಲ್ ಬಾರ್ಡ್', 'ವಿಂಡೋಸ್ ಬಿಂಗ್', 'ಮೆಟಾ ಲಮಾ' – ಹೀಗೆ ಕೃತಕ ಬುದ್ಧಿಮತ್ತೆಯ ಮೂಲಕ ಬಳಕೆದಾರರ ಮನಗೆಲ್ಲುವ ಚಾಟ್‌ಬಾಟ್‌ಗಳು ಈಗ ಲಭ್ಯ. ಆದರೆ, 2021ರಲ್ಲಿ ಚೀನಾದ ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನ ಅಕಾಡೆಮಿ ಪ್ರಕಟಿಸಿದ್ದ ಲೇಖನವೊಂದರ ಶೀರ್ಷಿಕೆ 'ನಂಬಿಕಸ್ಥ ಕೃತಕ ಬುದ್ಧಿಮತ್ತೆ'! ಆರ್ಥಿಕ ಅಭಿವೃದ್ಧಿಯನ್ನು ಇನ್ನಷ್ಟು ಹೆಚ್ಚಿಸಲು ಕೃತಕ ಬುದ್ಧಿಮತ್ತೆ ಹೆಚ್ಚು ಪ್ರಯೋಜನಕಾರಿ ಎಂದು ಆ ಲೇಖನ ಪ್ರತಿಪಾದಿಸಿತ್ತು. ಆ ಲೇಖನ ಪ್ರಕಟಗೊಂಡ ಎರಡು ವರ್ಷಗಳ ಅವಧಿಯಲ್ಲಿ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಚೀನಾ ತನ್ನ ಛಾಪು ಮೂಡಿಸಿದೆ.

ಸಾಮಾಜಿಕ–ಆರ್ಥಿಕ ವ್ಯವಸ್ಥೆ, ಮುಖಚಹರೆ ಗುರುತು ಪತ್ತೆ, ಸ್ವಯಂ ಚಾಲಿತ ಕಾರು, ಡ್ರೋಣ್ ಮತ್ತು ವಿಮಾನಗಳು, ತಯಾರಿಕಾ ಕ್ಷೇತ್ರ, ಬಾಹ್ಯಾಕಾಶ – ಹೀಗೆ, ಹಲವು ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಚೀನಾ ವ್ಯಾಪಕವಾಗಿ ಬಳಸುತ್ತಿದೆ. 2023ರಲ್ಲಿ ಕೃತಕ ಬುದ್ಧಿಮತ್ತೆಗೆ ಚೀನಾ ವಿನಿಯೋಗಿಸುತ್ತಿರುವ ಹಣ 14.7 ಶತಕೋಟಿ ಅಮೆರಿಕನ್ ಡಾಲರ್‌ಗಳು. 2026ರ ಹೊತ್ತಿಗೆ ಈ ಹೂಡಿಕೆ 26 ಶತಕೋಟಿ ಅಮೆರಿಕನ್ ಡಾಲರ್‌ಗೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.



ಚಂದ್ರನ ಅಂಗಳದಲ್ಲಿ ಚಾಂಗ್‌ಇ5 ಲ್ಯಾಂಡರ್

